# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 647 |
| ಉತ್ತರಿಸಬೇಕಾದ ದಿನಾಂಕ | 12.03.2025 |
| ಸದಸ್ಯರ ಹೆಸರು | ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | ಮಾನ್ಯ ಕಂದಾಯ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ವಿವಿಧ ಸಾಮಾಜಿಕ ಭದ್ರತಾ ಯೋಜನೆಯಡಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ಸಂಖ್ಯೆ ಎಷ್ಟು;</td><td>ಸಾಮಾಜಿಕ ಭದ್ರತೆಯ ವಿವಿಧ ಮಾಸಿಕ ಪಿಂಚಣಿ ಯೋಜನೆಗಳಡಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ಸಂಖ್ಯೆ ಕೆಳಗಿನಂತಿದೆ.
<table>
<tr><th rowspan="2">ಕ್ರ. ಸಂ.</th><th rowspan="2">ಯೋಜನೆಯ ಹೆಸರು</th><th colspan="2">ಒಟ್ಟು ಫಲಾನುಭವಿಗಳ ಸಂಖ್ಯೆ</th></tr>
<tr><th>ಕಲಬುರಗಿ ಜಿಲ್ಲೆ</th><th>ಯಾದಗಿರಿ ಜಿಲ್ಲೆ</th></tr>
<tr><td>1</td><td>ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ</td><td>61910</td><td>33200</td></tr>
<tr><td>2</td><td>ಮನಸ್ವಿನಿ</td><td>3315</td><td>2486</td></tr>
<tr><td>3</td><td>ಮೈತ್ರಿ</td><td>149</td><td>86</td></tr>
<tr><td>4</td><td>ರೈತ ವಿಧವಾ ವೇತನ</td><td>369</td><td>294</td></tr>
<tr><td>5</td><td>ಅಂಗವಿಕಲ ವೇತನ,</td><td>46669</td><td>31796</td></tr>
<tr><td>6</td><td>ಸಂಧ್ಯಾ ಸುರಕ್ಷಾ ವೇತನ</td><td>127152</td><td>92050</td></tr>
<tr><td>7</td><td>ವಿಧವಾ ವೇತನ</td><td>64348</td><td>35658</td></tr>
<tr><td colspan="2">ಒಟ್ಟು</td><td>303912</td><td>195570</td></tr>
</table></td></tr>
<tr><td>ಆ)</td><td>ಸದರಿ ಜಿಲ್ಲೆಯಲ್ಲಿ ಕಳೆದ 2 ವರ್ಷಗಳಲ್ಲಿ ಸಾಮಾಜಿಕ ಭದ್ರತಾ ಯೋಜನೆಯಡಿ ಬಹಳಷ್ಟು ಫಲಾನುಭವಿ ಗಳಿಗೆ ಪಿಂಚಣಿ ಸ್ಥಗಿತವಾಗಿ ರುವುದು ಹಾಗೂ ಪಿಂಚಣಿ ಪರಿಹಾರ ವಿಳಂಬವಾ ಗುತ್ತಿರುವುದನ್ನು ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)</td><td rowspan="2">ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳಡಿ ಎಲ್ಲಾ ಅರ್ಹ ಫಲಾನುಭವಿಗಳಿಗೆ ನವೆಂಬರ್-2023 ರ ವರೆಗೆ ಪ್ರತಿ ಮಾಹೆ ಖಜಾನೆ-2 ರಡಿಯಲ್ಲಿ ಪಿಂಚಣಿ ಪಾವತಿಗೆ ಕ್ರಮವಹಿಸಲಾಗಿದೆ. ಡಿಸೆಂಬರ್-2023 ರ ಮಾಹೆಯಿಂದ ಆಧಾರ್ ಆಧಾರಿತ ಪಿಂಚಣಿ ವ್ಯವಸ್ಥೆಯಡಿ (AEPS) ಪಾವತಿಸುವಂತೆ ಸರ್ಕಾರವು ದಿ:30-12-2023ರಂದು ಆದೇಶ ಹೊರಡಿಸಿರುವ ಹಿನ್ನೆಲೆಯಲ್ಲಿ ಫಲಾನುಭವಿಗಳು ತಮ್ಮ ಆಧಾರ್ ಸಂಖ್ಯೆ ಜೋಡಣೆ ಮಾಡಿ National Payment Corporation of India (NPCI) ಮ್ಯಾಪಿಂಗ್ ಮಾಡಿರುವ ಉಳಿತಾಯ ಖಾತೆಗೆ ಡಿಸೆಂಬರ್-2023ರ ಮಾಹೆಯಿಂದ ಪಿಂಚಣಿ ಜಮೆ ಮಾಡಲಾಗುತ್ತಿದೆ.<br><br>ಸಾಮಾಜಿಕ ಭದ್ರತಾ ಪಿಂಚಣಿ ಪಾವತಿಗಳನ್ನು NPCI ಮೂಲಕ ನಿರ್ವಹಿಸುತ್ತಿದ್ದು, ಕೆಲವು ಫಲಾನುಭವಿಗಳ ಬ್ಯಾಂಕ್ ಖಾತೆ ವಿವರ ಮತ್ತು IFSC CODE ನಿಖರವಾಗಿ ನೀಡದೆ ಇರುವ ಕಾರಣ NPCI ನಿಂದ ಸ್ವೀಕೃತವಾದ NO SUCH ACCOUNT / INVALID BANK DETAILS ಕಾರಣದಿಂದ ಕೆಲವು ಪ್ರಕರಣಗಳಲ್ಲಿ ಪಿಂಚಣಿ ಪಾವತಿ ಯಾಗದೆ ಇರುವುದು ಕಂಡು ಬಂದಿದ್ದ ಕಾರಣ, ಸದರಿ ಪ್ರಕರಣ</td></tr>
<tr><td>ಇ)</td><td>ಬ್ಯಾಂಕ್ ಅಕೌಂಟ್‌ಗೆ ಆಧಾರ್ ಜೋಡಣೆ ಯಾಗಿದ್ದರೂ 2-3 ತಿಂಗಳಿ</td></tr>
</table>

| | | |
|---|---|---|
| | ಗೊಮ್ಮೆ ಪಿಂಚಣಿ ನೀಡುತ್ತಿರುವುದಕ್ಕೆ ಕಾರಣವೇನು; ಪ್ರತಿ ತಿಂಗಳು ಪಿಂಚಣಿ ನೀಡಲು ಸರ್ಕಾರಕ್ಕೆ ಇರುವ ಅಡೆತಡೆಗಳೇನು? (ವಿವರ ನೀಡುವುದು) | ಗಳನ್ನು ಭೌತಿಕ ಪರಿಶೀಲನೆಗೆ ಒಳಪಡಿಸಿ ಮಾಹಿತಿ ಸಂಗ್ರಹಿಸಿ ತಂತ್ರಾಂಶದಲ್ಲಿ ಅಳವಡಿಸುವ ಸಂಬಂಧ ಅಂತಹ ಫಲಾನುಭವಿಗಳ ಪಟ್ಟಿಯನ್ನು ತಾಲ್ಲೂಕು ಮಟ್ಟದಲ್ಲಿ ಪಡೆಯಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ಬಗ್ಗೆ ಪರಿಶೀಲಿಸಿ ಬ್ಯಾಂಕ್ ಖಾತೆ ವಿವರ ಹಾಗೂ ವಿಳಾಸದ ನ್ಯೂನ್ಯತೆಯನ್ನು ಸರಿಪಡಿಸಲು ತಾಲ್ಲೂಕು ಹಂತದಲ್ಲಿ ಕ್ರಮವಹಿಸಲಾಗುತ್ತಿದೆ.<br><br>ಕೆಲವು ಫಲಾನುಭವಿಗಳ Aadhar Authentication failed ಆಗಿದ್ದು, NPCI ಮ್ಯಾಪಿಂಗ್ ಆಗಲು ಬಾಕಿಯಿರುವ ಕಾರಣ ಅಂತಹ ಫಲಾನುಭವಿಗಳಿಗೆ ಡಿಸೆಂಬರ್-2023 ರ ಮಾಹೆಯ ಪಿಂಚಣಿಯನ್ನು ಆಧಾರ್ ಆಧಾರಿತ ಡಿ.ಬಿ.ಟಿ.ಯಡಿ ಪಾವತಿಸಲು ಸಾಧ್ಯವಾಗಿರುವುದಿಲ್ಲ.<br><br>ಸದರಿ ಫಲಾನುಭವಿಗಳ ಆಧಾರ್ ಮಾಹಿತಿಯನ್ನು ಗ್ರಾಮ ಮಟ್ಟದಲ್ಲಿ ಪಡೆದು ಸರಿಪಡಿಸಲು ಕನಿಷ್ಠ 2ತಿಂಗಳ ಕಾಲಾವಕಾಶದ ಅಗತ್ಯವಿದ್ದ ಕಾರಣ ಅಂತಹ ಫಲಾನುಭವಿಗಳಿಗೆ ಮಾತ್ರ ಅನ್ವಯವಾಗುವಂತೆ ಡಿಸೆಂಬರ್-2023 ರಿಂದ ಫೆಬ್ರುವರಿ-2024 ರ ಮಾಹೆಯವರೆಗೆ ಖಜಾನೆ-2 ಮುಖಾಂತರ Account Based payment ರೀತಿಯಲ್ಲಿ ಪಿಂಚಣಿಯನ್ನು ಪಾವತಿಸುವಂತೆ ದಿನಾಂಕ:11-03-2024 ರಂದು ಸರ್ಕಾರವು ಆದೇಶ ಹೊರಡಿಸಿದ್ದು, ಸದರಿ ಆದೇಶಾನುಸಾರ Aadhar Authentication failed ಆಗಿರುವ ಮತ್ತು NPCI ಮ್ಯಾಪಿಂಗ್ ಆಗಲು ಬಾಕಿಯಿರುವ ಫಲಾನುಭವಿಗಳಿಗೆ ಮೇಲಿನಂತೆ ಪಿಂಚಣಿ ಪಾವತಿಸಲು ಕ್ರಮವಹಿಸಲಾಗಿದೆ.<br><br>ಮುಂದುವರೆದು, ಪ್ರಸ್ತುತ ಆಧಾರ್ ಜೋಡಣೆ ಮತ್ತು NPCI ಮ್ಯಾಪಿಂಗ್ ಆಗಿರುವ ಫಲಾನುಭವಿಗಳ ಬ್ಯಾಂಕ್ / ಅಂಚೆ ಉಳಿತಾಯ ಖಾತೆಗೆ ಪ್ರತಿ ಮಾಹೆ ಕೇಂದ್ರೀಕೃತವಾಗಿ ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಹಾಗೂ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ಆಯುಕ್ತಾಲಯದಿಂದ ಪಿಂಚಣಿ ಜಮಾ ಮಾಡಲಾಗುತ್ತಿದೆ. |

**ಕಡತ ಸಂಖ್ಯೆ:ಆರ್‌ಡಿ 40 ಕೆ.ಎ.ಟಿ/ ಎಸ್.ಎಸ್.ಪಿ 2025**

**(ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**